ಕರ್ನಾಟಕ ಸರ್ಕಾರ

# ಸಾರಿಗೆ ಇಲಾಖೆ

**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು–560027**
ದೂರವಾಣಿ ಸಂ:080–22235176, ಮೊಬೈಲ್: 9449863459, ಟೆಲಿಫ್ಯಾಕ್ಸ್–22235804

ಕ್ರಸಂ:ಸಾಆ/ಸಿಬ್ಬಂದಿ–5/ಪಿಆರ್–115/13–14 ದಿನಾಂಕ 27.08.2014

## ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

*****

ಸಾರಿಗೆ ಇಲಾಖೆಗೆ 25 ವಾಹನ ಚಾಲಕರನ್ನು ಒದಗಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ (ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್) ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲದ ಮುಖಾಂತರ ವೆಬ್‌ಸೈಟ್ ವಿಳಾಸ : www.eproc.karnataka.gov.in ನಲ್ಲಿ ಪಡೆಯುವುದು.

ಸಾರಿಗೆ ಇಲಾಖೆಯ ಅಧೀನ ಕಛೇರಿಗಳಲ್ಲಿ ಇಲಾಖೆಯ ವಾಹನಗಳ ಚಾಲನೆ ಮಾಡಲು 25 ವಾಹನ ಚಾಲಕರನ್ನು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯದೇಶ ನೀಡಿದ ದಿನಾಂಕದಿಂದ 1(ಒಂದು) ವರ್ಷಗಳ ಅವಧಿಗೆ ಚಾಲಕರ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇ–ಟೆಂಡರ್ ವೆಬ್‌ಸೈಟ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–25501216, 080–25501227 ಹಾಗೂ ಅಪರ ಸಾರಿಗೆ ಆಯುಕ್ತರು(ಆಡಳಿತ), ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿಯ 'ಎ' ಬ್ಲಾಕ್ ಟಿ.ಟಿ.ಎಂ.ಸಿ. ಕಟ್ಟಡ, ಬಿ.ಎಂ.ಟಿ.ಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು–27ಇಲ್ಲಿ ಈ ಬಗ್ಗೆ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.

| ಕ್ರ.ಸಂ. | ಕಾಮಗಾರಿಯ ಹೆಸರು | ಚಾಲಕರ ವಿವರ | ಅಗತ್ಯವಿರುವ ಚಾಲಕರ ಸಂಖ್ಯೆ | ಇಎಂಡಿ ಶುಲ್ಕ (ರೂ.ಗಳಲ್ಲಿ) | ಅಂದಾಜು ವೆಚ್ಚ (ಮಾಸಿಕ) | ಇ–ಫಾರಂ ಶುಲ್ಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ವಾಹನ ಸೇವೆಯನ್ನು ಒದಗಿಸುವುದು. | ಚಾಲಕರು | 25 | 50,000 | 2,90,000 | ಇ–ಪ್ರೊಕ್ಯೂರ್‌ಮೆಂಟ್‌ನಂತೆ |

| | | |
|---|---|---|
| 1 | ಇ–ಪೋರ್ಟಲ್ ಮೂಲಕ ದಾಖಲೆಗಳನ್ನು (ತಾಂತ್ರಿಕ ಮತ್ತು ಹಣಕಾಸು ಬಿಡ್ಡನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: | 06.10.2014 17:00 Hrs |
| 2 | ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ | 09.10.2014 15:00 Hrs |
| 3 | ಹಣಕಾಸು ಬಿಡ್ಡನ್ನು ತೆರೆಯುವ ದಿನಾಂಕ: | 15.10.2014 15:00 Hrs |

**ಷರತ್ತು/ನಿಬಂಧನೆಗಳನ್ನು ಮತ್ತು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್** http://www.eproc.karnataka.gov.in **ಮೂಲಕ ಹಾಗೂ ಕಛೇರಿಯ ವೇಳೆಯಲ್ಲಿ ಪಡೆಯಬಹುದು. (ರಜಾ ದಿನಗಳನ್ನು ಹೊರತುಪಡಿಸಿ).**

**ಸಹಿ/–**
**ಆಯುಕ್ತರು**
**ಸಾರಿಗೆ ಮತ್ತು ರಸ್ತೆ ಸುರಕ್ಷತೆ**
**ಬೆಂಗಳೂರು.**

ಕರ್ನಾಟಕ ಸರ್ಕಾರ
**ಸಾರಿಗೆ ಇಲಾಖೆ**
**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು-560027**
ದೂರವಾಣಿ ಸಂ:080-22235176, ಮೊಬೈಲ್: 9449863459, ಟೆಲಿಫ್ಯಾಕ್ಸ್-22235804

## ಸಾರಿಗೆ ಆಯುಕ್ತರ ಇಲಾಖೆಗೆ ವಾಹನ ಚಾಲಕರ ಸೇವೆಯನ್ನು ಪೂರೈಸಲು ಏಜೆನ್ಸಿಯವರಿಗೆ ವಿಧಿಸಿರುವ ಷರತ್ತು/ನಿಬಂಧನೆಗಳು

1) ಚಾಲಕರ ಸೇವೆಯನ್ನು ಒಂದು(1) ವರ್ಷ ಅವಧಿಗೆ ಮಾತ್ರ ಪಡೆಯಲು ಉದ್ದೇಶಿಸಲಾಗಿದ್ದು, ಸಾರಿಗೆ ಇಲಾಖೆಯ ಮತ್ತು ಏಜೆನ್ಸಿಯ ಒಪ್ಪಿಗೆಯೊಂದಿಗೆ ಮುಂದುವರೆಸಬಹುದಾಗಿದೆ. ಮುಂದುವರಿಸಿದಲ್ಲಿ ವಾರ್ಷಿಕ ಗರಿಷ್ಠ ಶೇಕಡಾ 8ರಷ್ಟು ಒಟ್ಟು ದರವನ್ನು ಹೆಚ್ಚಿಸಬಹುದಾಗಿದೆ.

2) ಕಾರ್ಮಿಕ ಇಲಾಖೆಯು ನಿಗದಿಪಡಿಸುವ ಕನಿಷ್ಟ ವೇತನಕ್ಕಿಂತ ಕಡಿಮೆ ಇಲ್ಲದ ವೇತನವನ್ನು ನೀಡತಕ್ಕದ್ದು.

3) ಅಂಗೀಕರಿಸಲಾದ ಸಂಸ್ಥೆಯವರು ನಿಯೋಜಿಸುವ ಚಾಲಕನು ಕಡ್ಡಾಯವಾಗಿ ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಹಾಗೂ 04ವರ್ಷಗಳ ಲಘು ವಾಹನ ಪರವಾನಗಿ ಪತ್ರ ಮತ್ತು ವಾಹನ ಚಾಲಕರಾಗಿ 03 ವರ್ಷಗಳ ತರಬೇತಿ ಹೊಂದಿರತಕ್ಕದ್ದು.

4) ಚಾಲಕರ ಸೇವೆಯನ್ನು ಒದಗಿಸಬೇಕಾಗಿರುವ ಕಛೇರಿಗಳ ವಿವರವನ್ನು ಅನುಬಂಧ-4ರಲ್ಲಿ ನಮೂದಿಸಿದೆ. ಅದಾಗ್ಯೂ ಅಂಗೀಕರಿಸಲಾದ ಏಜೆನ್ಸಿಯವರು ಇಲಾಖೆ ಮುಖ್ಯಸ್ಥರು ಸೂಚಿಸಿದ ಯಾವುದೇ ಕಛೇರಿಗೆ ಚಾಲಕರನ್ನು ಒದಗಿಸಲು ಬದ್ಧರಾಗತಕ್ಕದ್ದು.

5) ಚಾಲನ ವ್ಯವಸ್ಥೆಗಾಗಿ ಆರೋಗ್ಯವಾಗಿರುವ 18 ವರ್ಷಕ್ಕಿಂತ ಮೇಲ್ಪಟ್ಟ ಹಾಗೂ 40 ವರ್ಷದೊಳಗಿನ ವಯೋಮಿತಿಯೊಳಗಿರುವ ಚಾಲಕರನ್ನು ಮಾತ್ರ ಒದಗಿಸತಕ್ಕದ್ದು. ವಯೋಮಿತಿಗೆ ಸಂಬಂಧಿಸಿದಂತೆ ಅಧಿಕೃತವಾದ ದಾಖಲೆಯಿರುವವರನ್ನು ಮಾತ್ರ ನಿಯೋಜಿಸತಕ್ಕದ್ದು. ಸಂಬಂಧಿಸಿದ ಸಿಬ್ಬಂದಿಯ ಮೂಲ ದಾಖಲೆಗಳನ್ನು ಇಲಾಖೆಗೆ ಒದಗಿಸತಕ್ಕದ್ದು.

6) ಇಲಾಖೆಯ ವಾಹನಗಳನ್ನು ಸಂರಕ್ಷಿಸಲು ಬದ್ಧರಾಗಿರತಕ್ಕದ್ದು. ಇಲಾಖೆಯ ಯಾವುದೇ ಆಸ್ತಿಗೆ ಧಕ್ಕೆ ಉಂಟಾದಲ್ಲಿ ಅದರ ನಷ್ಟವನ್ನು ಭದ್ರತಾ ಗುತ್ತಿಗೆದಾರರೇ ಭರಿಸತಕ್ಕದ್ದು.

7) ಸಂಸ್ಥೆಯು ಕಾರ್ಮಿಕ ಇಲಾಖೆ, ಸೇವಾ ತೆರಿಗೆ, ವೃತ್ತಿ ತೆರಿಗೆ, ಪಿ.ಎಫ್. ಹಾಗೂ ಇ.ಎಸ್.ಐ. ಇಲಾಖೆಯಲ್ಲಿ ನೋಂದಾಯಿಸಿಕೊಂಡಿರತಕ್ಕದ್ದು. ಸದರಿ ಇ.ಎಸ್.ಐ., ಪಿ.ಎಫ್. ಮೊತ್ತವನ್ನು ಏಜೆನ್ಸಿಯವರು ನೇಮಿಸಲಾದ ಚಾಲಕರ ಹೆಸರಿನಲ್ಲಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಿದ್ದಾರೆಯೇ ಎಂಬುದನ್ನು ದೃಢೀಕರಿಸಿಕೊಂಡ ನಂತರವೇ ಮಾಸಿಕ ಬಿಲ್ಲಿನ ಮೊತ್ತವನ್ನು ಪಾವತಿಸಲಾಗುವುದು. ಸರ್ಕಾರದ ನೀತಿ ನಿಯಮಾವಳಿಗಳನುಸಾರ ಪ್ರತಿ ಮಾಹೆ ಇ.ಎಸ್.ಐ., ಪಿ.ಎಫ್‌ನ್ನು ಕಛೇರಿಗಳಿಗೆ ನೇಮಿಸಿರುವ ಚಾಲಕರ ಹೆಸರಿನಲ್ಲಿ ಪಾವತಿಯಾಗಿರುವ ಬಗ್ಗೆ ತಃಖ್ತೆಯೊಂದಿಗೆ ಚಲನ್ ಪ್ರತಿಯನ್ನು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದ ಮೊತ್ತವನ್ನು ಪಾವತಿ ಮಾಡಿರುವ ಬಗ್ಗೆ ಚಲನ್‌ನ ಪ್ರತಿಯನ್ನು ಸಾರಿಗೆ ಆಯುಕ್ತರ ಕಛೇರಿಗೆ ನೀಡತಕ್ಕದ್ದು. ಈ ಬಗ್ಗೆ ವಹಿ ಹಾಗೂ ದಾಖಲಾತಿ ನಿರ್ವಹಿಸತಕ್ಕದ್ದು. ಈ ಬಗ್ಗೆ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ, ಅವುಗಳಿಗೆ ಏಜೆನ್ಸಿಯವರೇ ಹೊಣೆಗಾರರಾಗಿರುತ್ತಾರೆ.

8) ಸಂಸ್ಥೆಯ ಚಾಲಕರು ಇಲಾಖಾ ಕರ್ತವ್ಯದಲ್ಲಿದ್ದಾಗ, ಮೃತಪಟ್ಟಲ್ಲಿ ಅಥವಾ ಅಪಘಾತಕ್ಕೀಡಾದಲ್ಲಿ ಆರ್ಥಿಕ ಅಥವಾ ಇನ್ನಾವುದೇ ಪರಿಹಾರವನ್ನು ಸರ್ಕಾರದಿಂದ ನೀಡಲಾಗುವುದಿಲ್ಲ. ಹಾಗೂ ಈ ಬಗ್ಗೆ ಯಾವುದೇ ಕಾರಣಕ್ಕೂ ಸಾರಿಗೆ ಇಲಾಖೆಯು ಬಾಧ್ಯಸ್ಥರಾಗಿರುವುದಿಲ್ಲ. ಸಂಬಂಧಪಟ್ಟ ಏಜೆನ್ಸಿಯೇ ಇದರ ಸಂಪೂರ್ಣ ಹೊಣೆಗಾರಿಕೆಯನ್ನು ಹೊರತಕ್ಕದ್ದು. ಇದಕ್ಕೆ ಸಂಬಂಧಿಸಿದ ಪರಿಹಾರ ಅಥವಾ ವೆಚ್ಚವನ್ನು ಏಜೆನ್ಸಿಯವರೇ ಭರಿಸತಕ್ಕದ್ದು.

9) ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ನಿಗದಿಪಡಿಸಲಾಗುವ ಕನಿಷ್ಠ ವೇತನ ದರಗಳಿಗೆ ಕಡಿಮೆ ಇರದಂತೆ ಟೆಂಡರ್ ದರ ನಮೂದಿಸುವುದು. ನಮೂದಿಸುವ ಟೆಂಡರ್ ದರದಲ್ಲಿ ಪಿ.ಎಫ್. + ಇ.ಎಸ್.ಐ. + ಸೇವಾ ತೆರಿಗೆ + ಸೇವಾ ಶುಲ್ಕ ಸೇರಿರತಕ್ಕದ್ದು.

10) ಯಶಸ್ವಿಯಾದ ಟೆಂಡರ್‌ದಾರರು ಈ ಕಛೇರಿಯಿಂದ ತಿಳಿವಳಿಕೆ ಪತ್ರ ಪಡೆದ ದಿನಾಂಕದಿಂದ 07 ದಿನಗಳೊಳಗಾಗಿ ಕಛೇರಿಗೆ ಬೇಕಾದ ಚಾಲಕರ ಸಂಖ್ಯೆಗೆ ಅನುಗುಣವಾಗಿ ಮಾನವ ಸಂಪನ್ಮೂಲ ಹೊಂದಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿ ಕರಾರು ಬರೆದುಕೊಟ್ಟು ಕಾರ್ಯಾದೇಶ ಪಡೆಯತಕ್ಕದ್ದು. ಇಲ್ಲವಾದಲ್ಲಿ, ಪಾವತಿಸಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗವುದು.

11) ಏಜೆನ್ಸಿಯು ಪ್ರತಿಯೊಬ್ಬ ಚಾಲಕನಿಗೂ ತನ್ನ ಮೊಹರು ಸಹಿತ ಸಹಿ ಮಾಡಿದ ಭಾವಚಿತ್ರವನ್ನೊಳಗೊಂಡ ಗುರುತಿನ ಚೀಟಿಯನ್ನು ಮತ್ತು ಸಮವಸ್ತ್ರಗಳನ್ನು(ಚಾಲಕರ ಹುದ್ದೆಗೆ ನಿಗದಿಪಡಿಸಿರುವಂತೆ) ಸರಬರಾಜು ಮಾಡುವುದು. ಚಾಲಕರ ಸೇವಾ ಅವಧಿಯಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

12) ಏಜೆನ್ಸಿ ಒದಗಿಸುವ ಎಲ್ಲಾ ಚಾಲಕರಿಗೂ ಶೂಗಳು ಮತ್ತು ನಿಗದಿತ ಸಮವಸ್ತ್ರವನ್ನು ಚಾಲಕನು ತನ್ನ ಚಾಲನಾ ಅವಧಿಯಲ್ಲಿ ಧರಿಸಿರತಕ್ಕದ್ದು. ಸಮವಸ್ತ್ರ ಧರಿಸದೆ ಸೇವೆಗೆ ಹಾಜರಾಗುವ ಚಾಲಕನ್ನು ಸೇವೆಯಿಂದ ತೆಗೆದುಹಾಕುವುದಲ್ಲದೆ ಆ ಪ್ರಮಾಣದ ಭದ್ರತಾ ಸೇವಾ ಶುಲ್ಕವನ್ನು ಗುತ್ತಿಗೆ ಮೊಬಲಗಿನಿಂದ ಕಡಿತಗೊಳಿಸಿ ಪಾವತಿಸುವುದಕ್ಕೆ ಏಜೆನ್ಸಿಯು ಒಪ್ಪತಕ್ಕದ್ದು.

13) ಏಜೆನ್ಸಿಯು ಚಾಲಕರ ಹಾಜರಾತಿಯನ್ನು ಸಂಬಂಧಪಟ್ಟ ಸಾರಿಗೆ ಇಲಾಖೆಯ ಅಧೀನ ಕಛೇರಿಗಳಿಂದ ಪಡೆದು ಸಾರಿಗೆ ಆಯುಕ್ತರ ಕಛೇರಿಗೆ ಪರಿಶೀಲನೆಗೆ ಒದಗಿಸತಕ್ಕದ್ದು. ಚಾಲಕರು ಸೇವೆಗೆ ಗೈರು ಹಾಜರಾದಲ್ಲಿ, ಅಂತಹವರ ಅಷ್ಟೂ ದಿನದ ಒಟ್ಟು ವೇತನವನ್ನು ಸದರಿ ಮಾಹೆಯ ಮೊಬಲಗಿನಲ್ಲಿ ಕಡಿತಗೊಳಿಸಿ ಪಾವತಿ ಮಾಡಲಾಗುವುದು. ಏಜೆನ್ಸಿಯು ಗೈರುಹಾಜರಾದ ಚಾಲಕರ ಬದಲಿ ವ್ಯವಸ್ಥೆಗಾಗಿ ಬೇರೆ ಚಾಲಕನನ್ನು ನಿಯೋಜಿಸಿದ್ದಲ್ಲಿ, ಹೆಚ್ಚುವರಿಯಾಗಿ ಪರಿಹಾರವನ್ನು ಕ್ಲೇಮು ಮಾಡತಕ್ಕದ್ದಲ್ಲ.

14) 25 ಚಾಲಕರು ಸೇವಾ ಸಮಯದಲ್ಲಿ ಗೈರು ಹಾಜರಾದಲ್ಲಿ ಅಥವಾ ರಜೆಯ ಮೇಲೆ ತೆರಳಿದಲ್ಲಿ, ಕಛೇರಿಗಳ ದಿನನಿತ್ಯದ ಸೇವೆಗೆ ಅಡಚಣೆಯಾಗದಂತೆ ಕೂಡಲೇ ಏಜೆನ್ಸಿಯವರು ಗೈರು ಹಾಜರಾದ ಚಾಲಕರ ಬದಲಿ ವ್ಯವಸ್ಥೆಯನ್ನು ತಕ್ಷಣ ಕಲ್ಪಿಸತಕ್ಕದ್ದು. ಈ ರೀತಿ ನಿಯೋಜಿಸಿದ ಸಿಬ್ಬಂದಿಗೆ ಯಾವುದೇ ಹೆಚ್ಚಿನ ವೇತನ/ಭತ್ಯೆಯನ್ನು ಕಛೇರಿಯ ವತಿಯಿಂದ ನೀಡಲಾಗುವುದಿಲ್ಲ. ಸದರಿ ವೆಚ್ಚವನ್ನು ಏಜೆನ್ಸಿಯವರೆ ಭರಿಸತಕ್ಕದ್ದು. ಯಾವುದೇ ಕಛೇರಿಗೆ ಯಾವುದೇ ದಿನ ಚಾಲಕರ ಸೇವೆಯನ್ನು ಒದಗಿಸಲು ವಿಫಲವಾದ ಪಕ್ಷದಲ್ಲಿ ಪ್ರತಿ ದಿನಕ್ಕೆ ಪ್ರತಿ ಚಾಲಕರ ಬಾಬ್ತು ರೂ.1000/–ನ್ನು ಏಜೆಸ್ಸಿಗೆ ಮಾಸಿಕ ಸಂಭಾವನೆಯನ್ನು ಪಾವತಿಸುವ ಸಂದರ್ಭದಲ್ಲಿ ಕಡಿತಗೊಳಿಸಿ ಪಾವತಿಸಲಾಗುವುದು.

15) ಚಾಲಕರು ಚಾಲನಾ ಸೇವೆಯಲ್ಲಿ ಕಾರ್ಯನಿರತ ಸಂದರ್ಭದಲ್ಲಿ ಯಾವುದೇ ಅಪಘಾತ, ಗಲಭೆ, ಘರ್ಷಣೆ ಹಾಗೂ ಏಟಿನಿಂದ ಗಾಯಗಳಾಗಿದ್ದಲ್ಲಿ ಅಥವಾ ಅನಾಹುತವಾದಲ್ಲಿ ಏಜೆನ್ಸಿಯು ಈ ಸಂಬಂಧ ಪೂರ್ಣ ಜವಾಬ್ದಾರಿಯನ್ನು ಹೊತ್ತು ಪೋಲೀಸ್ ಇಲಾಖೆಗೆ ದೂರು ಸಲ್ಲಿಸತಕ್ಕದ್ದು. ಈ ಸಂಬಂಧದಲ್ಲಿ ತಗಲುವ ಎಲ್ಲಾ ವೆಚ್ಚಗಳನ್ನು ಏಜೆನ್ಸಿಯು ಭರಿಸತಕ್ಕದ್ದು.

16) ಒಂದು ವೇಳೆ ಏಜೆನ್ಸಿಯು ಒದಗಿಸುವ ಚಾಲಕರ ವಯೋಮಿತಿಯು ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ವಯೋಮಿತಿ ಒಳಗೆ ಇರದಿದ್ದಲ್ಲಿ, ಇಲಾಖೆಯು ಅಂತಹವರನ್ನು ಕರ್ತವ್ಯದಿಂದ ತೆಗೆದುಹಾಕುವ ಹಕ್ಕನ್ನು ಹೊಂದಿರುತ್ತದೆ.

17) ಏಜೆನ್ಸಿಯು ಒದಗಿಸುವ ಚಾಲಕರ ಹಿಂದಿನ ಮಾಹೆಯ ಹಾಜರಾತಿ ಹಾಗೂ ಭದ್ರತಾ ಸೇವೆಯ ಕಾರ್ಯವೈಖರಿ ಬಗ್ಗೆ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ಹಾಗೂ ಸಾರಿಗೆ ಆಯುಕ್ತರ ಕಛೇರಿಯ ಅಪರ ಸಾರಿಗೆ ಆಯುಕ್ತರು (ಆಡಳಿತ)ರವರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಯಿಂದ ಚಾಲಕರ ಸೇವೆ ತೃಪ್ತಿಕರ ಕುರಿತು ದೃಢೀಪಡಿಸಿಕೊಂಡ ನಂತರ ಬಿಲ್ಲನ್ನು ಪಾವತಿಸಲಾಗುವುದು.

18) ಏಜೆನ್ಸಿಗಳಿಗೆ ಪಾವತಿ ಮಾಡುತ್ತಿರುವ ಮೊತ್ತವನ್ನು ಏಜೆನ್ಸಿಯು ಚಾಲಕರಿಗೆ ಪ್ರತಿ ಮಾಹೆ ನ್ಯಾಯಯುತವಾಗಿ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ಕನಿಷ್ಟ ವೇತನ ದರಗಳಿಗನುಸಾರವಾಗಿ ಸಂದಾಯ ಮಾಡತಕ್ಕದ್ದು. ಈ ಕುರಿತು ದಾಖಲೆ ಸಲ್ಲಿಸತಕ್ಕದ್ದು.

19) ಏಜೆನ್ಸಿಯವರಿಗೆ ಪಾವತಿಸುವ ಮಾಸಿಕ ಗುತ್ತಿಗೆ ಮೊಬಲಗಿನಲ್ಲಿ ಚಾಲ್ತಿಯಲ್ಲಿರುವ ದರದಂತೆ ಆದಾಯ ತೆರಿಗೆಯನ್ನು (T D S) ಕಡಿತಗೊಳಿಸಲಾಗುವುದು.

20) ಕಛೇರಿಯ ಹಾಗೂ ಏಜೆನ್ಸಿಯ ನಡುವೆ ಯಾವುದೇ ತಂಟೆ ತಕರಾರುಗಳು ಉದ್ಭವಿಸಿದಲ್ಲಿ, ಈ ಬಗ್ಗೆ ಸಾರಿಗೆ ಆಯುಕ್ತರ ತೀರ್ಮಾನವೇ ಅಂತಿಮವಾಗಿರುತ್ತದೆ.

21) ಇ.ಎಂ.ಡಿ. ಹಾಗೂ ಇಡಗಂಟು ಹಣದ ಮೇಲೆ ಇಲಾಖೆಯು ಬಡ್ಡಿ ನೀಡುವುದಿಲ್ಲ.

22) ಟೆಂಡರ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ರವರು ಹೊಂದಿರುತ್ತಾರೆ.

23) ಚಾಲಕರುಗಳಿಗೆ ಶಾಸನಗಳಲ್ಲಿ ನಿಗದಿಪಡಿಸಿರುವ ಕನಿಷ್ಟ ವೇತನವನ್ನು ಪಾವತಿಸುವುದು ಏಜೆನ್ಸಿಯ ಕರ್ತವ್ಯವಾಗಿರುತ್ತದೆ. ಇದರಿಂದ ಸಿಬ್ಬಂದಿ ಹಾಗೂ ಇಲಾಖೆಯ ನಡುವೆ Employee ಹಾಗೂ Employer ಸಂಬಂಧ ಉಂಟಾಗುವುದಿಲ್ಲ Employee ಮತ್ತು Employer ಸಂಬಂಧ ಕೇವಲ ಚಾಲಕರು ಹಾಗೂ ಏಜೆನ್ಸಿ ನಡುವೆ ಮಾತ್ರ ಇರುತ್ತದೆ.

24) ಗುತ್ತಿಗೆದಾರರು ತಾವು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ಪರಭಾರೆ ಮಾಡತಕ್ಕದ್ದಲ್ಲ.

25) ಕಾರ್ಮಿಕ ಕಾಯ್ದೆಯನ್ವಯ ಗುತ್ತಿಗೆ ಚಾಲಕರುಗಳ ಪೂರ್ಣ ಜವಾಬ್ದಾರಿಯು ಏಜೆನ್ಸಿಗಳದ್ದಾಗಿರುತ್ತದೆ.

26) ಚಾಲಕರುಗಳಿಗೆ ಸುರಕ್ಷಿತವಾದ ಸಲಕರಣೆಗಳನ್ನು ನೀಡುವುದು ಹಾಗೂ ತುರ್ತು ಸಮಯದಲ್ಲಿ ಅವರಿಗೆ ಚಿಕಿತ್ಸೆ ನೀಡುವುದು ಭದ್ರತಾ ಏಜೆನ್ಸಿಯ ಕರ್ತವ್ಯವಾಗಿರುತ್ತದೆ.

27) ಕಾರ್ಮಿಕ ಕಾಯ್ದೆಯನ್ವಯ ಎಲ್ಲಾ ಚಾಲಕರುಗಳಿಗೆ ಇ.ಎಸ್.ಐ., ಪಿ.ಎಫ್. ಮತ್ತು ಇತರೆ ಸೌಲಭ್ಯಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

28) ಇಲಾಖೆಯು ನೇಮಿಸಿಕೊಳ್ಳುವ ವಾಹನ ಚಾಲಕರುಗಳ ಸಂಖ್ಯೆಯನ್ನು ಕಾಲಕಾಲಕ್ಕೆ ಬೇಡಿಕೆಗನುಗುಣವಾಗಿ ಕಡಿಮೆಗೊಳಿಸುವ ಅಥವಾ ಹೆಚ್ಚಿಸುವ ಹಾಗೂ ಇತರೆ ಕಛೇರಿಗಳಿಗೆ ಬದಲಾಯಿಸುವ ಅಧಿಕಾರವನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ಹೊಂದಿದ್ದು, ಈ ಬಗ್ಗೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ನೀಡುವ ಸೂಚನೆಗೆ ಏಜೆನ್ಸಿಯು ಬದ್ಧರಾಗಿರತಕ್ಕದ್ದು.

29) ಏಜೆನ್ಸಿಯ ಚಾಲಕರು ನಿರ್ವಹಿಸುವ ವಾಹನಕ್ಕೆ ಅಪಘಾತ ಉಂಟಾದಲ್ಲಿ ಅಂತಹ ನಷ್ಟವನ್ನು ಏಜೆನ್ಸಿಯವರೇ ಭರಿಸತಕ್ಕದ್ದು.

30) ಇಲಾಖೆ ಕಾರ್ಯನಿರತ ಚಾಲಕನ ವಾಹನ ಪರವಾನಗಿ ಪತ್ರದ ಅವಧಿಯು ಮುಕ್ತಾಯಗೊಂಡಲ್ಲಿ ಅಂತಹ ಚಾಲಕನ ವಾಹನ ಪರವಾನಗಿಯನ್ನು ನವೀಕರಿಸಿದ ನಂತರವೇ ನೇಮಿಸತಕ್ಕದ್ದು.

31) ಮೇಲ್ಕಂಡಂತೆ ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲಾದ ದಾಖಲೆಗಳು ಸಮರ್ಪಕವಾಗಿದ್ದಲ್ಲಿ ಮತ್ತು ಇ.ಎಂ.ಡಿ ರೂ. 50,000/–ಗಳನ್ನು ಪಾವತಿಸಿದ್ದಲ್ಲಿ, ಮಾತ್ರ ಟೆಂಡರ್‌ನ್ನು ಪರಿಗಣಿಸಲಾಗುವುದು. ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

32) ಯಾವುದೇ ಕಾರಣವನ್ನು ನೀಡದೆ ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದೇ ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ಹೊಂದಿರುತ್ತಾರೆ.

33) ನಿಯೋಜಿಸಿದ ಚಾಲಕರು ಕಛೇರಿಯ ಕೆಲಸದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು, ಅಗತ್ಯವಿದ್ದಲ್ಲಿ ಸಾರ್ವಜನಿಕ ರಜಾ ದಿನ ಸೇರಿದಂತೆ ಮತ್ತಿತರ ತುರ್ತು ಸಂದರ್ಭದಲ್ಲಿ ಕಛೇರಿ ಮುಖ್ಯಸ್ಥರ ಸೂಚನೆಯಾನುಸಾರ ಕಾರ್ಯ ನಿರ್ವಹಿಸಲು ಬದ್ಧರಗಿರಬೇಕು.

34) ಮೇಲಿನ ಯಾವುದೇ ಷರತ್ತು/ನಿಬಂಧನೆಗಳನ್ನು ಪಾಲಿಸಲು ಏಜೆನ್ಸಿ ವಿಫಲವಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಏಜೆನ್ಸಿಯು ಪಾವತಿಸಿರುವ ಇ.ಎಂ.ಡಿ. ರೂ. 50,000/–ಗಳನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್‌ನ್ನು ಏಕಪಕ್ಷೀಯವಾಗಿ ರದ್ದುಪಡಿಸುವ ಅಧಿಕಾರವನ್ನು ಸಾರಿಗೆ ಆಯುಕ್ತರು ಹೊಂದಿರುತ್ತಾರೆ.

ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ಪಡೆಯತಕ್ಕದ್ದು.

ಮೇಲಿನ ಷರತ್ತು/ನಿಬಂಧನೆಗಳನ್ನು ಓದಿ ಒಪ್ಪಿ ಸಹಿ ಮಾಡಿರುತ್ತೇನೆ.

**ಏಜೆನ್ಸಿಯವರ ಸಹಿ ಮತ್ತು ಮೊಹರು**

ಕರ್ನಾಟಕ ಸರ್ಕಾರ

**ಸಾರಿಗೆ ಇಲಾಖೆ**

**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು–560027**

ದೂರವಾಣಿ ಸಂ:080–22235176, ಮೊಬೈಲ್: 9449863459, ಟೆಲಿಫ್ಯಾಕ್ಸ್–22235804


ಕ್ರಸಂ:ಸಾಆ/ಸಿಬ್ಬಂದಿ–5/ಪಿಆರ್–115/13–14 ದಿನಾಂಕ 27.08.2014

ಅನುಬಂಧ–1

**ಏಜೆನ್ಸಿಯವರು ಸಲ್ಲಿಸಬೇಕಾದ ದಾಖಲೆಗಳ ಚೆಕ್‌ಲಿಸ್ಟ್**

ಸಾರಿಗೆ ಇಲಾಖೆಯ ಅಧೀನ ಕಛೇರಿಗಳಿಗೆ ವಾಹನ ಚಾಲಕರನ್ನು ಒದಗಿಸುವ ಇ–ಪೋರ್ಟಲ್‌ನಲ್ಲಿ ಅಫ್‌ಲೋಡ್ ಮಾಡಬೇಕಾದ ವಿವರಗಳು :

| | | |
|---|---|---|
| 1. | ಏಜೆನ್ಸಿ ಹೆಸರು/ವಿಳಾಸ | |
| 2. | ಏಜೆನ್ಸಿ ಮಾಲೀಕರ ಹೆಸರು | |
| 3. | ಖಾಯಂ ವಿಳಾಸ | |
| 4. | ವ್ಯವಹಾರಿಕ ವಿಳಾಸ | |
| 5. | ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯಿಂದ ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಲುವಾಗಿ ಪಡೆದಿರುವ ನೋಂದಣಿ/ಪರವಾನಗಿ ವಿವರ (ನೋಂದಣಿ/ ಪರವಾನಗಿ ಪ್ರಮಾಣ ಪತ್ರದ ಪ್ರತಿ ಅಪ್‌ಲೋಡ್ ಮಾಡಿ) | |
| 6. | ಇ.ಎಸ್.ಐ. ನೋಂದಣಿ ಪ್ರಮಾಣ ಪತ್ರದ ವಿವರ (ನೋಂದಣಿ ಪ್ರಮಾಣ ಪತ್ರದ ಪ್ರತಿ ಅಪ್‌ಲೋಡ್ ಮಾಡಿ) | |
| 7. | ಪಿ.ಎಫ್. ನೋಂದಣಿ ಪ್ರಮಾಣ ಪತ್ರದ ವಿವರ (ನೋಂದಣಿ ಪ್ರಮಾಣ ಪತ್ರದ ಪ್ರತಿ ಅಪ್‌ಲೋಡ್ ಮಾಡಿ) | |
| 8 | ಸೇವಾ ತೆರಿಗೆ ನೋಂದಣಿ ಪ್ರಮಾಣ ಪತ್ರದ ವಿವರ (ನೋಂದಣಿ ಪ್ರಮಾಣ ಪತ್ರದ ಪ್ರತಿ ಅಪ್‌ಲೋಡ್ ಮಾಡಿ) | |
| 9 | ವೃತ್ತಿ ತೆರಿಗೆ ಬಗ್ಗೆ, ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ (ನೋಂದಾವಣೆ ಪ್ರಮಾಣ ಪತ್ರ ಅಫ್‌ಲೋಡ್ ಮಾಡಿ) | |
| 10 | ಆದಾಯ ತೆರಿಗೆ ಪಾನ್ ಸಂಖ್ಯೆ ಪಾನ್ ಕಾರ್ಡ್ ಪ್ರತಿ ಮತ್ತು ಆದಾಯ ತೆರಿಗೆ ಇಲಾಖೆಗೆ ಇತ್ತೀಚೆಗೆ ರಿರ್ಟನ್ಸ್ ಸಲ್ಲಿಸಿದ ವಿವರ ಅಪ್‌ಲೋಡ್ ಮಾಡಿ | |

| | | |
|---|---|---|
| 11 | ಕಳೆದ ಮೂರು(3) ವರ್ಷಗಳಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಅಂಡರ್‌ಟೇಕಿಂಗ್ / ಕಾರ್ಪೋರೇಷನ್‌ಗಳಿಗೆ ಕನಿಷ್ಠ 50 ವಾಹನ ಚಾಲಕರನ್ನು ಒದಗಿಸಿರುವ ಬಗ್ಗೆ ಅನುಭವ ಪ್ರಮಾಣ ಪತ್ರ ಅಪ್‌ಲೋಡ್ ಮಾಡತಕ್ಕದ್ದು. | |
| 12 | ಇ.ಎಂ.ಡಿ. ಪಾವತಿ ವಿವರ | |

**ಘೋಷಣೆ**

.............................................................................. ಆದ ನಾನು ಈ ಮೂಲಕ ಘೋಷಿಸುವುದೇನೆಂದರೆ, ಮೇಲ್ಕಂಡ ಕ್ರಮಸಂಖ್ಯೆ 1 ರಿಂದ 12 ರವರೆಗಿನ ವಿವರಗಳು ನನ್ನ ಗಮನಕ್ಕೆ ಹಾಗೂ ನಂಬಿಕೆಗೆ ತಿಳಿದಿರುವ ಮಟ್ಟಿಗೆ ಸರಿಯಿರುತ್ತದೆ. ಒಂದು ವೇಳೆ ನಾನು ಮೇಲೆ ಪೂರೈಸಿರುವ ಮಾಹಿತಿಗಳು ತಪ್ಪೆಂದು ಕಂಡು ಬಂದಲ್ಲಿ, ನನ್ನ ಟೆಂಡರ್‌ನ್ನು ತಿರಸ್ಕರಿಸಬಹುದಾಗಿದೆ.

ಸ್ಥಳ :

ದಿನಾಂಕ : ಏಜೆನ್ಸಿ ಮಾಲೀಕರ ಸಹಿ ಮತ್ತು ಹೆಸರು

ಕರ್ನಾಟಕ ಸರ್ಕಾರ
**ಸಾರಿಗೆ ಇಲಾಖೆ**
**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು–560027**
ದೂರವಾಣಿ ಸಂ:080–22235176, ಮೊಬೈಲ್: 9449863459, ಟೆಲಿಫ್ಯಾಕ್ಸ್–22235804

ಅನುಬಂಧ–2

**ಇ.ಎಂ.ಡಿ. ಮತ್ತು ಭದ್ರತಾ ಠೇವಣಿ ಮೊತ್ತವನ್ನು ಪಾವತಿಸುವ ವಿವರ**

1) ಟೆಂಡರ್‌ನಲ್ಲಿ ಭಾಗವಹಿಸುವ ಏಜೆನ್ಸಿಗಳು ರೂ.50,000/–ಗಳ ಇ.ಎಂ.ಡಿ. ಯನ್ನು ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ತಿಳಿಸಿರುವ ವಿಧಾನದ ಮೂಲಕ ಪಾವತಿಸತಕ್ಕದ್ದು.

2) ಅರ್ಹತೆ ಹೊಂದಿಲ್ಲದ ಏಜೆನ್ಸಿಗಳ ಇ.ಎಂ.ಡಿ. ಹಣವನ್ನು ಅರ್ಹತೆ ಹೊಂದಿದ ಟೆಂಡರ್‌ನ್ನು ನಿಶ್ಚಯಪಡಿಸಿದ ನಂತರ ಬಡ್ಡಿ ರಹಿತವಾಗಿ ನಿಯಮಾನುಸಾರ ಹಿಂಪಾವತಿಸಲಾಗುವುದು.

3) ಟೆಂಡರ್‌ನಲ್ಲಿ ಯಶಸ್ವಿಯಾಗಿ ಅರ್ಹತೆ ಹೊಂದಿದ ಏಜೆನ್ಸಿಯವರು ಇಲಾಖೆಯಿಂದ ತಿಳುವಳಿಕೆ ಪತ್ರ ಪಡೆದ ದಿನಾಂಕದಿಂದ ಏಳು ದಿನಗಳೊಳಗಾಗಿ ಇಲಾಖೆಗೆ ಬೇಕಾದ ಚಾಲಕರ ಸಂಖ್ಯೆಗೆ ಅನುಗುಣವಾಗಿ ಕರಾರು ಮಾಡಿಕೊಂಡು ಕಾರ್ಯಾದೇಶ ಪಡೆಯತಕ್ಕದ್ದು. ತಪ್ಪಿದಲ್ಲಿ ಪಾವತಿಸಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4) ಟೆಂಡರ್‌ನಲ್ಲಿ ಯಶಸ್ವಿಯಾದ ಏಜೆನ್ಸಿಯವರು ಕಾರ್ಯದೇಶದ ನಂತರ ಸೇವೆ ಪ್ರಾರಂಭಕ್ಕೆ ಮೊದಲು ಮೂರು(3) ಲಕ್ಷದ ಭದ್ರತಾ ಠೇವಣಿಯ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸಿ ಒಪ್ಪಂದ ಮಾಡಿಕೊಳ್ಳತಕ್ಕದ್ದು. ತದನಂತರ ಯಶಸ್ವಿಯಾಗದ ಏಜೆನ್ಸಿಯ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.

ಮೇಲಿನ ಷರತ್ತನ್ನು ಒಪ್ಪಿ ಸಹಿ ಮಾಡಿರುತ್ತೇನೆ.

ಏಜೆನ್ಸಿ ಸಹಿ ಮತ್ತು ಮೊಹರು

ಕರ್ನಾಟಕ ಸರ್ಕಾರ
**ಸಾರಿಗೆ ಇಲಾಖೆ**
**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು–560027**
ದೂರವಾಣಿ ಸಂ:080–22235176, ಮೊಬೈಲ್: 9449863459, ಟೆಲಿಫ್ಯಾಕ್ಸ್–22235804

ಅನುಬಂಧ–3

## ಸಾರಿಗೆ ಇಲಾಖೆಯ ಅಧೀನ ಕಛೇರಿಗಳಿಗೆ ಚಾಲಕರ ಸೇವೆಯನ್ನು ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಟೆಂಡರ್ ಸಲ್ಲಿಸಲು ಪಾಲಿಸಬೇಕಾದ ನಿಯಮಗಳು ಹಾಗೂ ವಿಧಾನಗಳಿಗೆ ಸಂಬಂಧಿಸಿದಂತೆ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು

1. ಏಜೆನ್ಸಿಯವರು ತಮ್ಮ ದರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಸಲ್ಲಿಸಬೇಕಾಗುತ್ತದೆ. ನಮೂದಿಸುವ ಮಾಹೆಯಾನ ದರಗಳನ್ನು ಅನುಬಂಧ–5ರ ಟೆಂಡರ್ ದರಗಳ ಶೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು. ಆರ್ಥಿಕ ಬಿಡ್/ದರವನ್ನು ಇ–ಪ್ರೊಕ್ಯೂರ್‌ಮೆಂಟ್‌ನ ಸಂಬಂಧಿಸಿದ/ನಿಗದಿತ ಜಾಗ/ಸ್ಥಳದಲ್ಲಿ ಮಾತ್ರ ಅಪ್‌ಲೋಡ್ ಮಾಡಬೇಕು. ಪೂರ್ವ ಅರ್ಹತಾ (ಪ್ರೀ ಕ್ವಾಲಿಫಿಕೇಷನ್) ದಾಖಲಾತಿಯಲ್ಲಿ ದರವನ್ನು ಸಮೂದಿಸಿದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು.

2. ಏಜೆನ್ಸಿಯವರು ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ನಿಗದಿಪಡಿಸುವ ಕನಿಷ್ಟ ವೇತನ ದರಗಳಿಗನುಗುಣವಾಗಿ ದರವನ್ನು ನಮೂದಿಸತಕ್ಕದ್ದು. ಗುತ್ತಿಗೆದಾರರು ಕನಿಷ್ಟ ವೇತನ ಇ.ಎಸ್.ಐ., ಪಿ.ಎಫ್., ಸೇವಾ ತೆರಿಗೆ, ಅನ್ವಯಿಸುವ ಇತರೆ ತೆರಿಗೆಗಳು, ಸೇವಾ ಶುಲ್ಕ ಸೇರಿ ದರ ನಮೂದಿಸತಕ್ಕದ್ದು. ತಪ್ಪಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

3. ಇಎಂಡಿ ಹೊರತುಪಡಿಸಿ, ಇ–ಪ್ರೋಕ್ಯೂರ್‌ಮೆಂಟ್‌ಗಳಿಗ ಸಲ್ಲಿಸಬೇಕಿರುವ ಪಾವತಿಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಮಾನುಸಾರ ಮಾಡತಕ್ಕದ್ದು. ಟೆಂಡರ್ ಪ್ರಕಟಣೆ ಮತ್ತು ಷರತ್ತುಗಳ ಬಗ್ಗೆ ಪೂರ್ಣವಾಗಿ ತಿಳಿದುಕೊಳ್ಳತಕ್ಕದ್ದು.

4. ಚಾಲಕರ ಸೇವೆಗೆ ಸಂಬಂಧಿಸಿದಂತೆ ಇಎಂಡಿ ರೂ. 50,000/–ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿಸಿರುವ ವಿಧಾನಗಳ ಮೂಲಕ ಪಾವತಿ ಮಾಡತಕ್ಕದ್ದು. ಯಶಸ್ವಿಯಾದ ಗುತ್ತಿಗೆದಾರರನ್ನು ಹೊರತುಪಡಿಸಿ ಉಳಿದ ಗುತ್ತಿಗೆದಾರರ ಇ.ಎಂ.ಡಿ.ಯನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯ ನಂತರ ಸಂಬಂಧಪಟ್ಟವರಿಗೆ ಮರುಪಾವತಿ ಮಾಡಲಾಗುವುದು.

ಕರ್ನಾಟಕ ಸರ್ಕಾರ

**ಸಾರಿಗೆ ಇಲಾಖೆ**

**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು-560027**

ದೂರವಾಣಿ ಸಂ:080-22235176, ಮೊಬೈಲ್: 9449863459, ಟೆಲಿಫ್ಯಾಕ್ಸ್-22235804


ಅನುಬಂಧ-4

**ಸಾರಿಗೆ ಇಲಾಖೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇರೆಗೆ ಚಾಲಕರ ಸೇವೆಯನ್ನು ಪಡೆಯಲು ಇಚ್ಚಿಸಿರುವ ಕಛೇರಿವಾರು ವಿವರ.**

| ಕ್ರ.ಸ | ಕಛೇರಿಯ ಹೆಸರು | ವಾಹನ ಚಾಲಕರ ಸಂಖ್ಯೆ |
|---|---|---|
| 1 | ಸಾರಿಗೆ ಆಯುಕ್ತರ ಕಛೇರಿ | 5 |
| 2 | ಬೆಂಗಳೂರು (ಕೇಂದ್ರ) | 2 |
| 3 | ಬೆಂಗಳೂರು (ಪಶ್ಚಿಮ) | 1 |
| 4 | ಬೆಂಗಳೂರು (ಉತ್ತರ) | 1 |
| 5 | ಬೆಂಗಳೂರು (ದಕ್ಷಿಣ) | 1 |
| 6 | ಬೆಂಗಳೂರು (ಪೂರ್ವ) | 1 |
| 7 | ಪ್ರಾ.ಸಾ.ಕ ಕೋಲಾರ | 1 |
| 8 | ಸ.ಪ್ರಾ.ಸಾ.ಕ ತಿಪಟೂರು | 1 |
| 9 | ನಗಲಿ ತನಿಖಾ ಠಾಣೆ | 1 |
| 10 | ಉ.ಸಾ.ಆ ಮೈಸೂರು | 1 |
| 11 | ಮೈಸೂರು (ಪಶ್ಚಿಮ) | 1 |
| 12 | ಗುಂಡ್ಲು ಪೇಟೆ ತನಿಖಾ ಠಾಣೆ | 1 |
| 13 | ಪ್ರಾ.ಸಾ.ಕ ಪುತ್ತೂರು | 1 |
| 14 | ಪ್ರಾ.ಸಾ.ಕ ಬೆಳಗಾವಿ | 1 |
| 15 | ಸ.ಪ್ರಾ.ಸಾ.ಕ ಬೈಲಹೊಂಗಲ | 1 |
| 16 | ಸ.ಪ್ರಾ.ಸಾ.ಕ ದಾಂಡೇಲಿ | 1 |
| 17 | ಪ್ರಾ.ಸಾ.ಕ ಗುಲಬರ್ಗಾ | 2 |
| 18 | ಪ್ರಾ.ಸಾ.ಕ ಹೊಸಪೇಟೆ | 1 |
| 19 | ಹಗರಿ ತನಿಖಾ ಠಾಣೆ | 1 |
| **ಒಟ್ಟು** | | **25** |

**ವಿ.ಸೂ:** ಇಲಾಖೆಯು ನೇಮಿಸಿಕೊಳ್ಳುವ ವಾಹನ ಚಾಲಕರುಗಳ ಸಂಖ್ಯೆಯನ್ನು ಕಾಲಕಾಲಕ್ಕೆ ಬೇಡಿಕೆಗನುಗುಣವಾಗಿ ಕಡಿಮೆಗೊಳಿಸುವ, ಬೇರೆ ಕಛೇರಿಗೆ ಬದಲಾಯಿಸುವ ಅಥವಾ ಹೆಚ್ಚಿಸುವ ಅಧಿಕಾರವನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ಹೊಂದಿದ್ದು, ಈ ಬಗ್ಗೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ನೀಡುವ ಸೂಚನೆಗೆ ಭದ್ರತಾ ಏಜೆನ್ಸಿಯು ಬದ್ಧರಾಗಿರತಕ್ಕದ್ದು.

ಮೇಲಿನ ಷರತ್ತನ್ನು ಒಪ್ಪಿ ಸಹಿ ಮಾಡಿರುತ್ತೇನೆ.

ಏಜೆನ್ಸಿ ಸಹಿ ಮತ್ತು ಮೊಹರು

ಕರ್ನಾಟಕ ಸರ್ಕಾರ
**ಸಾರಿಗೆ ಇಲಾಖೆ**
**ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು-560027**
ದೂರವಾಣಿ ಸಂ:080-22235176, ಮೊಬೈಲ್: 9449863459, ಟೆಲಿಫ್ಯಾಕ್ಸ್-22235804

ಅನುಬಂಧ-5

## ಚಾಲಕರ ಸೇವೆಯನ್ನು ಒದಗಿಸುವ ದರಗಳ ಷೆಡ್ಯೂಲ್

ಸಾರಿಗೆ ಇಲಾಖೆಯ ಅಧೀನ ಕಛೇರಿಗಳಲ್ಲಿ ವಾಹನ ಚಾಲಕರಾಗಿ ಕಾರ್ಯ ನಿರ್ವಹಿಸಲು ಈ ಕೆಳಕಂಡಂತೆ 25 ವಾಹನಚಾಲಕರುಗಳ ಸೇವೆಯನ್ನು ಒದಗಿಸಲು ಟೆಂಡರ್ ದರಗಳ ಷೆಡ್ಯೂಲ್.

ಏಜೆನ್ಸಿಗಳು ನಮೂದಿಸುವ ದರವು ಕಾರ್ಮಿಕ ಇಲಾಖೆಯು ನಿಗದಿಪಡಿಸುವ ಕನಿಷ್ಟ ವೇತನ ದರ+ಪಿ.ಎಫ್.+ಇ.ಎಸ್.ಐ.+ಸೇವಾತೆರಿಗೆ+ಅನ್ವಯವಾಗುವ ಇತರೆ ತೆರಿಗೆಗಳು+ಗುತ್ತಿಗೆದಾರರ ಸೇವಾ ಶುಲ್ಕ ಸೇರಿರತಕ್ಕದ್ದು. ದರಗಳ ಷೆಡ್ಯೂಲ್ ಈ ಕೆಳಕಂಡಂತಿದೆ.

| ಕ್ರ.ಸಂ | ವಿವರ | "ಮಾಹೆಯೊಂದಕ್ಕೆ ಪ್ರತಿ ಚಾಲಕನಿಗೆ" ನೀಡಬೇಕಾದ ದರ (ರೂ ಅಂಕಿ ಮತ್ತು ಪದಗಳಲ್ಲಿ) | 25 ಚಾಲಕರುಗಳಿಗೆ ಒಟ್ಟು ರೂಪಾಯಿ (ಪ್ರತಿ ಮಾಹೆಗೆ) (ಕ್ರ.ಸಂ(3)*25) | 25 ಚಾಲಕರುಗಳಿಗೆ ಒಟ್ಟು ರೂಪಾಯಿ (ವಾರ್ಷಿಕ) (ಕ್ರ.ಸಂ(4)*12) |
|---|---|---|---|---|
| 1 | 2 | 3 | 4 | 5 |
| ಅ) | ಏಜೆನ್ಸಿಯಿಂದ ಪ್ರತಿ ಚಾಲಕನಿಗೆ, ಪ್ರತಿ ತಿಂಗಳಿಗೆ ನೀಡಲಾಗುವ ನಿವ್ವಳ ಸಂಭಾವನೆ ಮೊತ್ತ (ನಿಯಾಮಾನುಸಾರ ಕನಿಷ್ಠ ವೇತನಕ್ಕಿಂತ ಕಡಿಮೆ ಇರಬಾರದು) | | | |
| ಆ) | ಏಜೆನ್ಸಿಯ ಅಥವಾ ಕಾಂಟ್ರ್ಯಾಕ್ಟರ್ ಸೇವಾ ಶುಲ್ಕ, ಸೇವಾ ತೆರಿಗೆ ಸೇರಿ, ಮತ್ತು ಇನ್ನಿತರ ವೆಚ್ಚಗಳು ಸೇರಿ ಪ್ರತಿ ತಿಂಗಳಿಗೆ ಪ್ರತಿ ಚಾಲಕನ ಬಾಬ್ತು ಸಾರಿಗೆ ಇಲಾಖೆಯಿಂದ ಏಜೆನ್ಸಿಗೆ ನೀಡಬೇಕಾದ ದರ. | | | |
| **ಒಟ್ಟು** | | | | |

**ಸೂಚನೆ :**

1. ಕ್ರಮ ಸಂಖ್ಯೆ(ಆ) ರಲ್ಲಿನ 3ನೇ ಕಲಂನಲ್ಲಿ ಅತೀ ಕಡಿಮೆ ದರವನ್ನು ನಮೂದಿಸಿದ ಬಿಡ್‌ದಾರರನ್ನು ಆಯ್ಕೆ ಮಾಡಲಾಗುವುದು.
2. ಏಜೆನ್ಸಿಯವರು ತಮ್ಮ ದರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಸಲ್ಲಿಸಬೇಕಾಗುತ್ತದೆ. ನಮೂದಿಸುವ ಮಾಹೆಯಾನ ದರಗಳನ್ನು ಅನುಬಂಧ-5ರ ಟೆಂಡರ್ ದರಗಳ ಶೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು.

**ದಿನಾಂಕ :**

**ಸ್ಥಳ :** **(ಏಜೆನ್ಸಿಯ ಮಾಲೀಕರ ಸೀಲು ಹಾಗೂ ಸಹಿ)**